ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು, ನರಸಿಂಹರಾಜ ಚೌಕ, ಬೆಂಗಳೂರು-560 002.

ಸಂಖ್ಯೆ:ಬಿಬಿಎಂಪಿ/ಆ/ಪಿ.ಆರ್/ 6093 /2019-20 ದಿನಾಂಕ: 12/12/2019

ರವರಿಗೆ :-
ಮುಖ್ಯ ಅಭಿಯಂತರರು
(ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಯಲಹಂಕ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಕೆರೆಗಳು, ಯೋಜನೆ-ಕೇಂದ್ರ, ಬೃಹತ್ ನೀರುಗಾಲುವೆ, ರಸ್ತೆ ಮೂಲಭೂತ ಸೌಕರ್ಯ, ಟಿ.ವಿ.ಸಿ.ಸಿ)

-:: ಕಛೇರಿ ಆದೇಶ ::-

ವಿಷಯ :- ಬಿಬಿಎಂಪಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ನವನಗರೋತ್ಥಾನ ಕಾಮಗಾರಿಗಳ ಅಂದಾಜು ಪಟ್ಟಿಗಳಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಚಾರ್ಜಸ್ ಶೇ.1% ರಷ್ಟು ಕಾರ್ಮಿಕರ ಸೆಸ್ ಶೇ.1% ರಷ್ಟು ಮತ್ತು ಜಿ.ಎಸ್.ಟಿ ಶೇ.12% ರಷ್ಟು ಪಾಲಿಕೆಯಲ್ಲಿ ಅಳವಡಿಸುವ ಆದೇಶವನ್ನು ಮಾರ್ಪಡಿಸುವ ಬಗ್ಗೆ.

ಉಲ್ಲೇಖ :-
1. ಸಂಖ್ಯೆ:ಬಿಬಿಎಂಪಿ/ಮುಲೆಅ/ಪಿಆರ್/001/2019-20, ದಿನಾಂಕ:09/05/2019.
2. ಆಯುಕ್ತರು ರವರ ಕಛೇರಿ ಪತ್ರ ಸಂಖ್ಯೆ:ಬಿಬಿಎಂಪಿ/ಆ/ಪಿಆರ್/5287/2019-20, ದಿನಾಂಕ:05/11/2019.
3. ಸಂಖ್ಯೆ:ಕೆಆರ್ಐಡಿಎಲ್/ಕಾಮಗಾರಿ/ಬಿಬಿಎಂಪಿ/ಸಾ/2019-20, ದಿನಾಂಕ:19/11/2019.
4. ಸಂಖ್ಯೆ:ಕೆಆರ್ಐಡಿಎಲ್/ಕಾಮಗಾರಿ/ಬಿಬಿಎಂಪಿ/ಸಾ/2019-20/5476, ದಿನಾಂಕ:05/12/2019.

--*-*-*-*

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿ ರೂ.2.00 ಕೋಟಿ ಮಿತಿಯೊಳಗಿನ ಕಾಮಗಾರಿಗಳನ್ನು ಕೆಆರ್ಐಡಿಎಲ್ ಸಂಸ್ಥೆಗೆ ವಹಿಸಿಕೊಡಲು ಆದೇಶಿಸಲಾಗಿರುತ್ತದೆ, ಇದಕ್ಕೆ ಸಂಬಂಧಿಸಿದಂತೆ ಪಾಲಿಕೆಯ ಆಂತರಿಕ ಕಛೇರಿ ಪತ್ರ ಸಂಖ್ಯೆ:ಬಿಬಿಎಂಪಿ/ಆ/ಪಿಆರ್/5287/2019-20, ದಿನಾಂಕ:05/11/2019 ರ ಪತ್ರದಲ್ಲಿ ಏಐಖಆಐ ಖುಚಿಡಿಂಜ ಶೇ.1% ರಂತೆ ನಿರ್ವಹಿಸಲು ಪಾಲಿಕೆಯ ಕಾಮಗಾರಿ ಇಲಾಖೆಯ ಅಭಿಯಂತರರು ರವರುಗಳಿಗೆ ಸೂಚಿಸಲಾಗಿರುತ್ತದೆ, ಟೆಂಡರ್ ಕಾಮಗಾರಿಗಳಿಗೆ ಹಾಗೂ ಕೆಆರ್ಐಡಿಎಲ್ ಸಂಸ್ಥೆಗೆ ವಹಿಸುವ ಕಾಮಗಾರಿಗಳ Defect Liability Period ಅವಧಿಯನ್ನು 3 ವರ್ಷಗಳಿಗೆ ನಿಗಧಿಪಡಿಸಲು ಆಂತರಿಕ ಕಛೇರಿ ಟಿಪ್ಪಣಿ ಹೊರಡಿಸಲಾಗಿದೆ.

ಮೇಲ್ಕಂಡ ಉಲ್ಲೇಖ (4) ರ ಅಡಿಯಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರು ಪಾಲಿಕೆಗೆ ಪತ್ರ ಬರೆದು, ಕಾಮಗಾರಿಯ ಅನುಷ್ಠಾನ, ಪರಿವೀಕ್ಷಣೆ ಹಾಗೂ ನಿಗಧಿತ ಅವಧಿಯಲ್ಲಿ ಪೂಣಗೊಳಿಸುವುದರ ಸಂಬಂಧ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಪ್ರತ್ಯೇಕವಾಗಿ ಒಂದು ವಲಯ ಕಛೇರಿ, 05 ವಿಭಾಗ ಕಛೇರಿಗಳು ಮತ್ತು 10 ಉಪ-ವಿಭಾಗ ಕಛೇರಿಗಳನ್ನು ಸೃಜಿಸಿ, ಅವುಗಳಿಗೆ ಅವಶ್ಯಕ ತಾಂತ್ರಿಕ ಸಿಬ್ಬಂಧಿಗಳಿಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದಂತೆ, ಆಡಳಿತಾತ್ಮಕ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರದಿಂದ ಸಂಸ್ಥೆಗೆ ಯಾವುದೇ ತರಹದ ಅನುದಾನ / ಆರ್ಥಿಕ ಸಂಪನ್ಮೂಲ ಹಂಚಿಕೆ ಇಲ್ಲದೇ ಇರುವುದರಿಂದ ಸಂಸ್ಥೆಯು ಗಳಿಸಿದ ಸ್ವಂತ ಸಂಪನ್ಮೂಲದಿಂದ ಆಡಳಿತಾತ್ಮಕ ವೆಚ್ಚವನ್ನು ಭರಿಸಬೇಕಾಗಿದೆ ಹಾಗೂ ದಿನಾಂಕ:04/09/1987 ರ ಸರ್ಕಾರದ ನಡುವಳಿಯಲ್ಲಿ ಸಂಸ್ಥೆಯ ಆಡಳಿತಾತ್ಮಕ ವೆಚ್ಚವನ್ನು ಶೇ.10% ರಂತೆ ಭರಿಸಲು ವಿವಿಧ ಇಲಾಖೆಗಳಿಗೆ ಆದೇಶಿಸಲಾಗಿರುತ್ತದೆ. ಕಾಲ ಕ್ರಮೇಣ ಸಂಸ್ಥೆಯು ಆಡಳಿತಾತ್ಮಕ ವೆಚ್ಚದಲ್ಲಿ ಸುಧಾರಣೆ ತಂದು ಶೇ.3% ಕ್ಕೆ ಇಳಿಸಲಾಗಿದ್ದು, ಅಲ್ಲದೇ ಸಂಸ್ಥೆಯು ಯಾವುದೇ ನಿರ್ವಹಣಾ ವೆಚ್ಚ ಪಡೆಯದೇ ಕಾಮಗಾರಿಗಳನ್ನು ನಿರ್ವಹಿಸಲು ಆರ್ಥಿಕವಾಗಿ ಸಶಕ್ತವಾಗಿಲ್ಲವೆಂದು ತಿಳಿಸುತ್ತಾ, ಸಂಸ್ಥೆಯು ನಿರ್ವಹಿಸುವ ಕಾಮಗಾರಿಗಳನ್ನು ಆಯಾ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ವಯ ನಿರ್ವಹಿಸುತ್ತಿದ್ದು, ಕಾಲ ಕ್ರಮೇಣ ಮಾರುಕಟ್ಟೆಯಲ್ಲಿ ಯಾವುದೇ ದರಗಳು ಹೆಚ್ಚಳವಾದರೂ ಎಲ್ಲವನ್ನು ಎಸ್.ಆರ್ ದರಗಳಲ್ಲಿಯೇ ಸರಿದೂಗಿಸಬೇಕಾಗಿದೆ. ಈ ಸಂಬಂಧ ಆಡಳಿತಾತ್ಮಕ ವೆಚ್ಚವನ್ನು ಸರಿದೂಗಿಸಲು ಸಂಸ್ಥೆಯ ಆಡಳಿತ ಮಂಡಳಿಯು ಕೂಲಂಕುಷವಾಗಿ ಪರಿಶೀಲಿಸಿ ಕನಿಷ್ಠ ಅವಶ್ಯಕ ಶೇ.3% ರಷ್ಟನ್ನು ಸೇವಾ ಶುಲ್ಕದ ರೂಪದಲ್ಲಿ ಪಡೆಯಲು ಅನುಮೋದನೆ ನೀಡಲಾಗಿರುತ್ತದೆ ಎಂದು ತಿಳಿಸುತ್ತಾ, ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ತಿಳಿಸಿದಂತೆ ನಿರ್ವಹಣಾ ವೆಚ್ಚವನ್ನು ಕನಿಷ್ಠ ಶೇ.3% ರಷ್ಟು ಮತ್ತು ಕಾರ್ಮಿಕರ ಸೆಸ್ ಶೇ.1% ರಷ್ಟು ಸೇರಿ ಶೇ.4% ರಷ್ಟು ಪರಿಗಣಿಸಲು ಕೋರಿರುತ್ತಾರೆ.

Scanned by CamScanner

ಈ ಹಿನ್ನೆಲೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರು ಉಲ್ಲೇಖ (4) ಮತ್ತು (5) ರ ಪತ್ರದಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ನಿರ್ವಹಣಾ ವೆಚ್ಚವನ್ನು ಶೇ.1%ಕ್ಕೆ ಮಿತಗೊಳಿಸುವುದರಿಂದ ಸಂಸ್ಥೆಯು ಎದುರಿಸಬೇಕಾದ ತೊಂದರೆ ಮತ್ತು ಆಡಳಿತಾತ್ಮಕ ವೆಚ್ಚವನ್ನು ಸರಿದೂಗಿಸಲು ನಿರ್ವಹಣಾ ವೆಚ್ಚವನ್ನು ಕನಿಷ್ಠ ಶೇ.3% ರಷ್ಟು ಪರಿಗಣಿಸಲು ಕೋರಿರುವಂತೆ, ಮೇಲ್ಕಂಡ ಉಲ್ಲೇಖ (3) ರ ಅಡಿಯಲ್ಲಿ ಅಂದಾಜು ಪಟ್ಟಿ ತಯಾರಿಕೆಯಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಸೇವಾ ಶುಲ್ಕವನ್ನು ಪರಿಗಣಿಸಬೇಕಾದ ಶೇಕಡವಾರುವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

-:: ಆದೇಶ ::-

1. ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸುವ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ನೀಡಬೇಕಾದ ಸೇವಾ ಶುಲ್ಕವನ್ನು ಶೇ.3% ರಷ್ಟು ಮತ್ತು ಕಾರ್ಮಿಕರ ಸೆಸ್ ಶೇ.1% ರಷ್ಟು ಒಟ್ಟು (ಶೇ.3% + ಶೇ.1%) = ಶೇ.4% ರಷ್ಟು ಪರಿಗಣಿಸಲು ಆದೇಶಿಸಿದೆ.
2. ನಿಯಮಾನುಸಾರ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿರುವ ಕಾಮಗಾರಿಗಳಿಗೆ ಗುತ್ತಿಗೆ ಕರಾರನ್ನು ಮಾಡಿಕೊಳ್ಳುವಾಗ ಹಕ್ಕು ಭಾಧ್ಯತಾ ಅವಧಿಯನ್ನು (Defect Liability Period) ಕಡ್ಡಾಯವಾಗಿ 3 ವರ್ಷಗಳಿಗೆ ನಿಗಧಿಪಡಿಸಲು ಆದೇಶಿಸಿದೆ.
3. ಸರ್ಕಾರದ ಆದೇಶ ಸಂಖ್ಯೆ:PWD/65/RDF/2017, Dated:11/10/2018 ರಂತೆ ಶೇ.12% ರಷ್ಟು ಜಿ.ಎಸ್.ಟಿ ಅನ್ನು ಅಂದಾಜು ಪಟ್ಟಿಯಲ್ಲಿ ಪ್ರತ್ಯೇಕವಾಗಿ ಸೇರಿಸಲು ಆದೇಶಿಸಿದೆ. ಗುತ್ತಿಗೆ ಕರಾರಿನಲ್ಲಿ "GST amount shall be paid to the M/s.K.R.I.D.L separately" ಎಂದು ನಮೂದಿಸಲು ಸೂಚಿಸಿದೆ.
4. ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಅಇ/497/ಎಂ.ಎನ್.ವೈ2016(ಭಾಗ-1), ದಿನಾಂಕ:07/07/2017 ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ Performance Security ಪಡೆಯಲು ಸರ್ಕಾರದ ಆದೇಶ ಸಂಖ್ಯೆ:FD/4/PCL/2008, ದಿನಾಂಕ:14/10/2008 ರಂತೆ ಕ್ರಮ ತೆಗೆದುಕೊಳ್ಳಲು ಆದೇಶ ನೀಡಿರುವ ಮೇರೆಗೆ ಗುತ್ತಿಗೆ ಕರಾರು ಪತ್ರದಲ್ಲಿ ಅಳವಡಿಸಿಕೊಳ್ಳಲು ನಿರ್ದೇಶಿಸಿದೆ.

ಆಯುಕ್ತರು 5/12/2019
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಮಾಹಿತಿಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಮಾಹಿತಿಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ / ಹಣಕಾಸು / ಆಡಳಿತ / ಘನತ್ಯಾಜ್ಯ ವಸ್ತುಗಳ ನಿರ್ವಹಣೆ) ರವರ ಮಾಹಿತಿಗಾಗಿ ಕಳುಹಿಸಿದೆ.
4. ಪ್ರಧಾನ ಅಭಿಯಂತರರು ರವರ ಮಾಹಿತಿಗಾಗಿ ಕಳುಹಿಸಿದೆ.
5. ವ್ಯವಸ್ಥಾಪಕರ ನಿರ್ದೇಶಕರು, ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ, ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009 ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಎಲ್ಲಾ ವಲಯ ಅಪರ / ಜಂಟಿ ಆಯುಕ್ತರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7. ಉಪ ಆಯುಕ್ತರು (ಆಡಳಿತ) / ಮುಖ್ಯ ಲೆಕ್ಕ ಪರಿಶೋಧಕರು / ವಲಯಗಳ ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ಪಾಲಿಕೆಯ ಎಲ್ಲಾ ವಲಯ ಮತ್ತು ಯೋಜನಾ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳಿಗೆ ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ರವಾನಿಸಲು ಸೂಚಿಸಿದೆ.
9. ಕಛೇರಿ ಕಡತಕ್ಕೆ.

Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು, ನರಸಿಂಹರಾಜ ಚೌಕ, ಬೆಂಗಳೂರು-560002.

ಸಂಖ್ಯೆ:ಬಿ.ಬಿ.ಎಂ.ಪಿ/ಆಯುಕ್ತರು/ಪಿ.ಆರ್/ 6093 /2019-20 ದಿನಾಂಕ:: 12/12/2019

ರವರಿಗೆ :-
ವ್ಯವಸ್ಥಾಪಕ ನಿರ್ದೇಶಕರು,
ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ, ಗ್ರಾಮೀಣ ಅಭಿವೃದ್ಧಿ ಭವನ,
ಆನಂದ ರಾವ್ ಸರ್ಕಲ್, ಬೆಂಗಳೂರು

ಮಾನ್ಯರೇ,

ವಿಷಯ :- ಬಿಬಿಎಂಪಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ನವನಗರೋತ್ಥಾನ ಕಾಮಗಾರಿಗಳ ಅಂದಾಜು ಪಟ್ಟಿಗಳಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಚಾರ್ಜಸ್ ಶೇ.1% ರಷ್ಟು ಕಾರ್ಮಿಕರ ಸೆಸ್ ಶೇ.1% ರಷ್ಟು ಮತ್ತು ಜಿ.ಎಸ್.ಟಿ ಶೇ.12% ರಷ್ಟು ಪಾಲಿಕೆಯಲ್ಲಿ ಅಳವಡಿಸುವ ಆದೇಶವನ್ನು ಮಾರ್ಪಡಿಸುವ ಬಗ್ಗೆ.

ಉಲ್ಲೇಖ :-
1. ಸಂಖ್ಯೆ:ಬಿಬಿಎಂಪಿ/ಮುಲೆಅ/ಪಿಆರ್/001/2019-20, ದಿನಾಂಕ:09/05/2019.
2. ಆಯುಕ್ತರು ರವರ ಕಛೇರಿ ಪತ್ರ ಸಂಖ್ಯೆ:ಬಿಬಿಎಂಪಿ/ಆ/ಪಿಆರ್/5287/2019-20, ದಿನಾಂಕ:05/11/2019.
3. ಸಂಖ್ಯೆ:ಕೆಆರ್ಐಡಿಎಲ್/ಕಾಮಗಾರಿ/ಬಿಬಿಎಂಪಿ/ಸಾ/2019-20, ದಿನಾಂಕ:19/11/2019.
4. ಸಂಖ್ಯೆ:ಕೆಆರ್ಐಡಿಎಲ್/ಕಾಮಗಾರಿ/ಬಿಬಿಎಂಪಿ/ಸಾ/2019-20/5476, ದಿನಾಂಕ:05/12/2019.

--*-*-*-*

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿ ರೂ.2.00 ಕೋಟಿ ಮಿತಿಯೊಳಗಿನ ಕಾಮಗಾರಿಗಳನ್ನು ಕೆಆರ್ಐಡಿಎಲ್ ಸಂಸ್ಥೆಗೆ ವಹಿಸಿಕೊಡಲು ಆದೇಶಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಪಾಲಿಕೆಯ ಆಂತರಿಕ ಕಛೇರಿ ಪತ್ರ ಸಂಖ್ಯೆ:ಬಿಬಿಎಂಪಿ/ಆ/ಪಿಆರ್/5287/2019-20, ದಿನಾಂಕ:05/11/2019 ರ ಪತ್ರದಲ್ಲಿ KRIDL Charges ಶೇ.1% ರಂತೆ ನಿರ್ವಹಿಸಲು ಪಾಲಿಕೆಯ ಕಾಮಗಾರಿ ಇಲಾಖೆಯ ಅಭಿಯಂತರರು ರವರುಗಳಿಗೆ ಸೂಚಿಸಲಾಗಿರುತ್ತದೆ. ಟೆಂಡರ್ ಕಾಮಗಾರಿಗಳಿಗೆ ಹಾಗೂ ಕೆಆರ್ಐಡಿಎಲ್ ಸಂಸ್ಥೆಗೆ ವಹಿಸುವ ಕಾಮಗಾರಿಗಳ Defect Liability Period ಅವಧಿಯನ್ನು 3 ವರ್ಷಗಳಿಗೆ ನಿಗಧಿಪಡಿಸಲು ಆಂತರಿಕ ಕಛೇರಿ ಟಿಪ್ಪಣಿ ಹೊರಡಿಸಲಾಗಿದೆ.

ಮುಂದುವರೆದಂತೆ, ವ್ಯವಸ್ಥಾಪಕ ನಿರ್ದೇಶಕರು, ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರು ಉಲ್ಲೇಖ (4) ಮತ್ತು (5) ರ ಪತ್ರದಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ನಿರ್ವಹಣಾ ವೆಚ್ಚವನ್ನು ಶೇ.1%ಕ್ಕೆ ಮಿತಗೊಳಿಸುವುದರಿಂದ ಸಂಸ್ಥೆಯು ಎದುರಿಸಬೇಕಾದ ತೊಂದರೆ ಮತ್ತು ಆಡಳಿತಾತ್ಮಕ ವೆಚ್ಚವನ್ನು ಸರಿದೂಗಿಸಲು ನಿರ್ವಹಣಾ ವೆಚ್ಚವನ್ನು ಕನಿಷ್ಠ ಶೇ.3% ರಷ್ಟು ಪರಿಗಣಿಸಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಉಲ್ಲೇಖ (3) ರ ಅಡಿಯಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಅನುಷ್ಠಾನಗೊಳಿಸಲು ಕೋರುವ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ಪರಿಗಣಿಸಲು ಸೂಚಿಸಿದ ಸೇವಾ ಶುಲ್ಕವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶವನ್ನು ಪಾಲಿಸಲು ಪಾಲಿಕೆಯ ಕಾಮಗಾರಿ ಇಲಾಖೆಯ ಅಭಿಯಂತರರು ರವರುಗಳಿಗೆ ಸೂಚಿಸಲಾಗಿದೆ.

Scanned by CamScanner

-:: ಆದೇಶ ::-

1. ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸುವ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ನೀಡಬೇಕಾದ ಸೇವಾ ಶುಲ್ಕವನ್ನು ಶೇ.3% ರಷ್ಟು ಮತ್ತು ಕಾರ್ಮಿಕರ ಸೆಸ್ ಶೇ.1% ರಷ್ಟು ಒಟ್ಟು (ಶೇ.3% + ಶೇ.1%) = ಶೇ.4% ರಷ್ಟು ಪರಿಗಣಿಸಲು ಆದೇಶಿಸಿದೆ.
2. ನಿಯಮಾನುಸಾರ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿರುವ ಕಾಮಗಾರಿಗಳಿಗೆ ಗುತ್ತಿಗೆ ಕರಾರನ್ನು ಮಾಡಿಕೊಳ್ಳುವಾಗ ಹಕ್ಕು ಭಾಧ್ಯತಾ ಅವಧಿಯನ್ನು (Defect Liability Period) ಕಡ್ಡಾಯವಾಗಿ 3 ವರ್ಷಗಳಿಗೆ ನಿಗಧಿಪಡಿಸಲು ಆದೇಶಿಸಿದೆ.
3. ಸರ್ಕಾರದ ಆದೇಶ ಸಂಖ್ಯೆ:PWD/65/RDF/2017, Dated:11/10/2018 ರಂತೆ ಶೇ.12% ರಷ್ಟು ಜಿ.ಎಸ್.ಟಿ ಅನ್ನು ಅಂದಾಜು ಪಟ್ಟಿಯಲ್ಲಿ ಪ್ರತ್ಯೇಕವಾಗಿ ಸೇರಿಸಲು ಆದೇಶಿಸಿದೆ. ಗುತ್ತಿಗೆ ಕರಾರಿನಲ್ಲಿ "GST amount shall be paid to the M/s.K.R.I.D.L separately" ಎಂದು ನಮೂದಿಸಲು ಸೂಚಿಸಿದೆ.
4. ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಅಇ/497/ಎಂ.ಎನ್.ವೈ2016 (ಭಾಗ-1), ದಿನಾಂಕ:07/07/2017 ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ Performance Security ಪಡೆಯಲು ಸರ್ಕಾರದ ಆದೇಶ ಸಂಖ್ಯೆ:FD/4/PCL/2008, ದಿನಾಂಕ:14/10/2008 ರಂತೆ ಕ್ರಮ ತೆಗೆದುಕೊಳ್ಳಲು ಆದೇಶ ನೀಡಿರುವ ಮೇರೆಗೆ ಗುತ್ತಿಗೆ ಕರಾರು ಪತ್ರದಲ್ಲಿ ಅಳವಡಿಸಿಕೊಳ್ಳಲು ನಿರ್ದೇಶಿಸಿದೆ.

ಆಯುಕ್ತರು 12/12/2019
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಮಾಹಿತಿಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಮಾಹಿತಿಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆ / ಹಣಕಾಸು / ಆಡಳಿತ / ಘನತ್ಯಾಜ್ಯ ವಸ್ತುಗಳ ನಿರ್ವಹಣೆ) ರವರ ಮಾಹಿತಿಗಾಗಿ ಕಳುಹಿಸಿದೆ.
4. ಪ್ರಧಾನ ಅಭಿಯಂತರರು ರವರ ಮಾಹಿತಿಗಾಗಿ ಕಳುಹಿಸಿದೆ.
5. ಎಲ್ಲಾ ವಲಯ ಅಪರ / ಜಂಟಿ ಆಯುಕ್ತರು ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ಉಪ ಆಯುಕ್ತರು (ಆಡಳಿತ) / ಮುಖ್ಯ ಲೆಕ್ಕ ಪರಿಶೋಧಕರು / ವಲಯಗಳ ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7. ಪಾಲಿಕೆಯ ಎಲ್ಲಾ ವಲಯ ಮತ್ತು ಯೋಜನಾ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳಿಗೆ ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ರವಾನಿಸಲು ಸೂಚಿಸಿದೆ.
8. ಕಛೇರಿ ಕಡತಕ್ಕೆ.

Scanned by CamScanner